ತಳಿಯ ರೇಷ್ಮೆಗೂಡಿನಿಂದ ಕಚ್ಚಾ ರೇಷ್ಮೆ ತೆಗೆದು, ರೇಷ್ಮೆ ನೂಲನ್ನು ಸಿದ್ಧಪಡಿಸುತ್ತಾರೆ. ಅದಾದ ಮೇಲೆ ನೇಕಾರರು ವಿಶೇಷ ವಿನ್ಯಾಸ ಒದಗಿಸಿ ಸೀರೆಗೆ ಅಂತಿಮ ಟಚ್ ನೀಡುತ್ತಾರೆ. ವೈವಿಧ್ಯಮಯ ವಿನ್ಯಾಸಗಳಿಂದ ಕಂಗೊಳಿಸುತ್ತಿರುವ ಈ ಮಟ್ಕಾ ಸಿಲ್ಕ್ ಸೀರೆಗಳು ತನ್ನ ಅಪ್ಪಟ ಪರಿಶುದ್ಧತೆ, ರಿಚ್‌ನೆಸ್ ಮತ್ತು ಎಲಿಗೆಂಟ್ ಲುಕ್‌ನಿಂದಾಗಿ ಅಪಾರ ಖ್ಯಾತಿ ಪಡೆದಿವೆ. ಅಷ್ಟೇ ಅಲ್ಲದೆ ಈ ಸೀರೆಗಳ ಇನ್ನಿತರ ವೈಶಿಷ್ಟ ಎಂದರೆ ನಾಲ್ಕು ಐದು ಬಣ್ಣಗಳು, ಸೆರಗು, ಬಾರ್ಡರ್‌ಗಳಲ್ಲಿ ವಿವಿಧ ಕಲರ್ಸ್ ಮತ್ತು ಶೇಡ್ಸ್ ಇರುತ್ತವೆ. ಈ ಸೀರೆಗಳ ಡಿಸೈನ್‌ಗಳಲ್ಲಿ ಜಿಗ್‌ಜಾಗ್ ಮತ್ತು ಡಿಜಿಟಲ್ ವಿನ್ಯಾಸಗಳು ಹೆಚ್ಚು ಜನಪ್ರಿಯತೆ ಪಡೆದುಕೊಂಡಿವೆ.

ಆಧುನಿಕ ಮನೋಭಾವದ ಯುವತಿಯರು ಇಂತಹ ವಿನ್ಯಾಸಗಳನ್ನೇ ಹೆಚ್ಚಾಗಿ ಇಷ್ಟಪಟ್ಟು ಧರಿಸುತ್ತಿದ್ದಾರೆ. ಈ ಸೀರೆಗಳನ್ನು ಹೆಚ್ಚಾಗಿ ಪಾರ್ಟಿಗಳಲ್ಲಿ, ಇಲ್ಲವೇ ಶುಭ ಸಮಾರಂಭಗಳಲ್ಲಿ ಧರಿಸುವುದರಿಂದ ಎಲ್ಲರಿಗಿಂತ ಭಿನ್ನವಾದ ವ್ಯಕ್ತಿತ್ವ  ನಿಮ್ಮದಾಗುತ್ತದೆ. ಸ್ಥೂಲಕಾಯದವರು ಸಾಮಾನ್ಯವಾಗಿ ಪಾರ್ಟಿಗಳಲ್ಲಿ ಭಾರೀ ಜರಿ ಸೀರೆಗಳನ್ನು ಉಡುವುದಿಲ್ಲ. ಅಂಥವರು ಹಗುರ ಹಾಗೂ ನುಣುಪಾಗಿರುವ ಈ ತರಹದ ಮಟ್ಕಾ ಸಿಲ್ಕ್ ಸೀರೆಗಳನ್ನು ಆಯ್ಕೆ ಮಾಡಿಕೊಳ್ಳುವುದು ಉತ್ತಮ. ಆಫೀಸ್‌ವೇರ್‌ಗೂ ಇದು ಉತ್ತಮ ಆಯ್ಕೆ.

ಸಾಕಷ್ಟು ತಿಳಿಯಾದ ಬಣ್ಣಗಳಲ್ಲಿ ದೊರೆಯುವ ಈ ಸೀರೆಗಳಲ್ಲಿ ಬೇಬಿ ಪಿಂಕ್, ಸಿಲ್ವರ್, ತಿಳಿ ನೀಲಿ ಬಣ್ಣ ಹಾಗೂ ಈರುಳ್ಳಿ ಬಣ್ಣಗಳು ವಿಶಿಷ್ಟ ಎನಿಸಿವೆ. ಇನ್ನು ಬರೀ ಪ್ಲೇನ್ ಬ್ಲಾಕ್ ಮತ್ತು ವೈಟ್ ಬಣ್ಣಗಳ ಈ ಮಟ್ಕಾ ಸಿಲ್ಕ್ ಸೀರೆಗಳನ್ನು ಕಾಲೇಜು ಕನ್ಯೆಯರು ಹೆಚ್ಚಾಗಿ ಇಷ್ಟಪಡುತ್ತಿದ್ದಾರೆ. ಈ ಸೀರೆಗಳ ಜೊತೆಗೆ ಗೋಲ್ಡನ್ ಮತ್ತು ಸಿಲ್ವರ್ ಬ್ಲೌಸ್‌ಗಳು ಚೆನ್ನಾಗಿ ಒಪ್ಪುತ್ತವೆ. ಈ ಸೀರೆಗಳ ನಿರ್ವಹಣೆ ಕೂಡ ಮಾಡುವುದೂ ಅತ್ಯಂತ ಸುಲಭ. ಬೇರೆ ರೇಷ್ಮೆ ಸೀರೆಗಳನ್ನು ಡ್ರೈವಾಶ್ ಮಾಡಿಸಿದಂತೆ ಇವುಗಳನ್ನು ಡ್ರೈವಾಶ್‌ಗೆ ಕೊಡದೇ ಮನೆಯಲ್ಲಿಯೇ ಸುಲಭವಾಗಿ ವಾಶ್ ಮಾಡಬಹುದು. ಆದರೂ ಬಿಸಿ ನೀರಿನಲ್ಲಿ ನೆನೆಸದೇ ತಣ್ಣಗಿನ ನೀರಿನಲ್ಲಿ ವಾಶ್ ಮಾಡುವುದು ಉತ್ತಮ.



## ಖಾದಿ ಸೀರೆಗೆ ಕಾಲದ ಹಂಗಿಲ್ಲ..

ಕೆಲವೊಮ್ಮೆ ಫ್ಯಾಷನ್‌ನಲ್ಲಿ, ನಿರ್ವಹಣೆಯಲ್ಲಿ ಹಾಗೂ ಉಡಲು ಸೂಕ್ತವಾಗುವ ವಿಷಯದಲ್ಲಿ ಖಾದಿ ಸೀರೆಗಳು ರೇಷ್ಮೆ ಸೀರೆಯನ್ನೂ ಮೀರಿಸುತ್ತವೆ. ಖಾದಿ ಉಡುಪಿಗೆ ಕಾಲದ ಹಂಗಿಲ್ಲ. ಎಲ್ಲ ಕಾಲಕ್ಕೂ ಸೂಕ್ತವಾಗುವ, ಎಲ್ಲ ವಯೋಮಾನಕ್ಕೂ ಒಪ್ಪುವ, ಫ್ಯಾಷನ್‌ಗೂ ಸಂಪ್ರದಾಯಕ್ಕೂ ಸೈ ಎನ್ನುವ ಉಡುಪು ಖಾದಿ. ಖಾದಿ ಸೀರೆ, ಸಲ್ವಾರ್, ದುಪ್ಪಟ್ಟಾ, ಶಾಲು, ಪೈಜಾಮ ಎಲ್ಲವೂ ತೊಡಲು ಯೋಗ್ಯವಾದ ಉಡುಗೆಯೇ. ಕಾಲಕ್ಕೆ ತಕ್ಕಂತೆ ನಮ್ಮ ದಿರಿಸು ಬದಲಾದರೂ ಖಾದಿ ಬಟ್ಟೆಯಲ್ಲೂ ಮಾರ್ಪಾಡು ಆಗುತ್ತಿರುತ್ತದೆ. ಗುಣಮಟ್ಟ ಮಾತ್ರ ಅದೇ ರೀತಿಯಲ್ಲಿರುತ್ತದೆ.

ಸಿಂಥೆಟಿಕ್ ಸೀರೆ, ಉಡುಪು ಕೆಲವೊಮ್ಮೆ ಔಟ್‌ಡೇಟೆಡ್ ಆಗುವುದುಂಟು. ಆದರೆ ಖಾದಿ ಮತ್ತು ರೇಷ್ಮೆ ಎಂದಿಗೂ ಔಟ್ ಆಫ್ ಫ್ಯಾಷನ್ ಆಗುವುದೇ ಇಲ್ಲ ಎಂಬುದು ಫ್ಯಾಷನ್ ತಜ್ಞರ ಅಭಿಮತ. ಜತೆಗೆ ಬಡವರಿಂದ ಹಿಡಿದು ಶ್ರೀಮಂತರವರೆಗೆ ಯಾರು ಬೇಕಾದರೂ ಖಾದಿ ಬಟ್ಟೆ ಧರಿಸಿ ಖುಷಿ ಪಡಬಹುದು. ಏಕೆಂದರೆ ಬಡವರಿಗೂ ಖಾದಿ ಉಡುಪು ಕೈಗೆಟುಕುವಂತಿದೆ. ಇದರಲ್ಲಿ ತರಾವರಿ ಬೆಲೆಯ ಉಡುಗೆ ತೊಡುಗೆ ಸಿಗುವುದರಿಂದ ಯಾರು ಬೇಕಾದರೂ ಇದನ್ನು ಕೊಳ್ಳಬಹುದು.

ಖಾದಿ ಉಡುಪು ಎಲ್ಲ ವಯೋಮಾನದವರಿಗೆ ಆಪ್ಯಾಯಮಾನ. ಇದು ಸಖತ್ ಲುಕ್ ಹಾಗೂ ಗಂಭೀರತೆಯನ್ನು ಪ್ರತಿಬಿಂಬಿಸುವ ಉಡುಗೆ.

ಖಾದಿ ಸೀರೆ ಹಗುರವಾಗಿದ್ದು ತೊಟ್ಟುಕೊಳ್ಳಲು ಆರಾಮದಾಯಕವಾಗಿದೆ. ಇದು ಪ್ರೊಫೆಷನಲ್ ಲುಕ್ ನೀಡಲು ಸಹಕಾರಿ. ಖಾದಿ ದುಪ್ಪಟ್ಟಾ ಸೌಂದರ್ಯಕ್ಕೆ ಹೆಚ್ಚಿನ ಒತ್ತಾಸೆ ನೀಡುತ್ತದೆ. ಖಾದಿಯ ವಿವಿಧ ವಿಧಗಳಾದ ಫ್ಯಾಬ್ರಿಕ್ ಮಿಶ್ರಿತ ಖಾದಿ, ಶುದ್ಧ ಖಾದಿ ಬಳಸುವವರಿಗೆ ಮೆಚ್ಚುಗೆಯಾಗುವುದರಲ್ಲಿ ಸಂಶಯವಿಲ್ಲ.

★ ಯು.ಎ.

